## ನಿಮ್ಮೊಡನೆ

# ಅಕ್ರಮ ಧಾರ್ಮಿಕ ಸ್ಥಳಗಳಿಗೆ ಮುಕ್ತಿ ಎಂದು?

**ಅನಧಿಕೃತ ಧಾರ್ಮಿಕ ಕಟ್ಟಡಗಳು ತಲೆ ಎತ್ತುವುದಾದರೂ ಹೇಗೆ? ದೇವರ ಹೆಸರಲ್ಲಿ ಭೂಮಿ ಕಬಳಿಸುವ ಹುನ್ನಾರ ಇದು. ಒಂದು ರೀತಿಯಲ್ಲಿ, ಜನರ ಧಾರ್ಮಿಕ ಭಾವನೆಗಳನ್ನು ಬಳಸಿಕೊಂಡು ನಡೆಸುವ ಅವ್ಯವಹಾರ.**

ಸಾರ್ವಜನಿಕ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಧಾರ್ಮಿಕ ಸ್ಥಳಗಳ ತೆರವಿಗೆ ಇನ್ನೂ ಮೀನಮೇಷ ಎಣಿಸುತ್ತಿರುವ ರಾಜ್ಯ ಸರ್ಕಾರಗಳನ್ನು ಸುಪ್ರೀಂಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಅಕ್ರಮ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸುವುದೊ ಅಥವಾ ಬೇರೆ ಸ್ಥಳಗಳಿಗೆ ವರ್ಗಾಯಿಸುವುದೊ ಎಂಬ ಬಗ್ಗೆ ನಿರ್ಧಾರಗಳನ್ನು ಕೈಗೊಂಡು ಕ್ರಮಗಳನ್ನು ಜರುಗಿಸಬೇಕೆಂಬ ಕೋರ್ಟ್ ನಿರ್ದೇಶನವನ್ನು ಪಾಲಿಸಲು ವಿಫಲವಾದಲ್ಲಿ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳೇ ತಮ್ಮ ಮುಂದೆ ಖುದ್ದು ಹಾಜರಾಗಬೇಕೆಂಬ ಆದೇಶ ನೀಡುವುದಾಗಿ ಸುಪ್ರೀಂಕೋರ್ಟ್ ಬೆದರಿಕೆ ಹಾಕಿದೆ.

ಈಗ ಈ ಬಗ್ಗೆ ಕ್ರಮ ಕೈಗೊಳ್ಳಲು ಮತ್ತೆ ಎರಡು ವಾರಗಳ ಕಾಲಾವಕಾಶವನ್ನು ಸೆಪ್ಟೆಂಬರ್ 14ರಂದು ಸುಪ್ರೀಂಕೋರ್ಟ್ ನೀಡಿದೆ. ತನ್ನ ನಿರ್ದೇಶನ ಪಾಲಿಸಬೇಕೆಂದು ರಾಜ್ಯಗಳಿಗೆ ಸುಪ್ರೀಂಕೋರ್ಟ್ ಸಮಯಾವಕಾಶ ನೀಡುತ್ತಿರುವುದು ಇದು ಮೂರನೇ ಬಾರಿ.

2001ರ ಭಾರತದ ಜನಗಣತಿ ಒಂದು ಅಚ್ಚರಿದಾಯಕವಾದ ಅಂಕಿ ಅಂಶವನ್ನು ಹೊರಗೆಡಹಿತ್ತು. ರಾಷ್ಟ್ರದಲ್ಲಿ 24ಲಕ್ಷ ಪೂಜಾ ಸ್ಥಳಗಳಿವೆ ಎಂಬುದು ಆ ವಿಚಾರ. ರಾಷ್ಟ್ರದಲ್ಲಿರುವ ಶಾಲೆಗಳ ಪ್ರಮಾಣ 21 ಲಕ್ಷ. ಶಾಲೆಗಳಿಗಿಂತ ಧಾರ್ಮಿಕ ಸ್ಥಳಗಳ ಸಂಖ್ಯೆಯೇ ಹೆಚ್ಚು ಎಂಬುದು ಸೋಜಿಗದ ಸಂಗತಿಯಾಗಿತ್ತು. ಆದರೆ ಅಲ್ಲಿ ಹೊರಗೆಡಹಲಾಗದಿದ್ದ ಅಂಶವೆಂದರೆ ಈ ಧಾರ್ಮಿಕ ಸ್ಥಳಗಳಲ್ಲಿ ಹೆಚ್ಚಿನವು ಅನಧಿಕೃತ ಎಂಬುದು.

ರಸ್ತೆಗಳು, ಉದ್ಯಾನವನಗಳು ಸೇರಿದಂತೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ದೇವರ ಗುಡಿ, ಮಸೀದಿ, ಚರ್ಚ್, ಗುರುದ್ವಾರ ಮತ್ತಿತರ ಯಾವುದೇ ಧಾರ್ಮಿಕ ಸ್ಥಳಗಳಿಗೆ ಅವಕಾಶ ನೀಡಬಾರದೆಂದು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 2009ರ ಸೆಪ್ಟೆಂಬರ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ನಂತರ ತೆರವುಗೊಳಿಸಲಾದ, ಬೇರೆಡೆ ವರ್ಗಾಯಿಸಲಾದ ಅಥವಾ ಅಕ್ರಮವನ್ನು ಸಕ್ರಮ ಮಾಡಿ ನಿಯಮಿತಗೊಳಿಸಲಾದ ಅನಧಿಕೃತ ಧಾರ್ಮಿಕ ಸ್ಥಳಗಳ ಕುರಿತಂತೆ ಸಮಗ್ರ ಪ್ರಮಾಣಪತ್ರಗಳನ್ನು ಸಲ್ಲಿಸಲು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಈ ವರ್ಷ ಜುಲೈ 27ರಂದು ಸುಪ್ರೀಂಕೋರ್ಟ್ ನಿರ್ದೇಶಿಸಿತ್ತು.

ವಿವಿಧ ರಾಜ್ಯ ಸರ್ಕಾರಗಳು ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ಗಳ ಪ್ರಕಾರ, ತಮಿಳು ನಾಡಿನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ 77,450ರಷ್ಟು ಅನಧಿಕೃತ ಧಾರ್ಮಿಕ ಸ್ಥಳಗಳಿವೆ. ಅತ್ಯಂತ ಕಡಿಮೆ ಅಕ್ರಮ ಧಾರ್ಮಿಕ ಸ್ಥಳಗಳಿರುವುದು ದೆಹಲಿಯಲ್ಲಿ. ಇಲ್ಲಿರುವ ಈ ಬಗೆಯ ಪ್ರಾರ್ಥನಾ ಸ್ಥಳಗಳು ಕೇವಲ 52. ಕರ್ನಾಟಕದಲ್ಲಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳ ಸಂಖ್ಯೆ 2814. ಗುಜರಾತ್ 15,000, ಮಧ್ಯ ಪ್ರದೇಶ 51,624, ರಾಜಸ್ಥಾನ 58,253, ಉತ್ತರ ಪ್ರದೇಶ 45,000, ಹಾಗೂ ಮಹಾರಾಷ್ಟ್ರ 17,385 ಅಕ್ರಮ ಧಾರ್ಮಿಕ ಕಟ್ಟಡಗಳನ್ನು ಹೊಂದಿವೆ. ಒರಿಸ್ಸಾ, ತ್ರಿಪುರಾ, ಹಿಮಾಚಲಪ್ರದೇಶ, ಗೋವಾ ಮತ್ತಿತರ ಸಣ್ಣಪುಟ್ಟ ರಾಜ್ಯಗಳಲ್ಲೂ ಈ ಬಗೆಯ ಅಕ್ರಮ ಧಾರ್ಮಿಕ ಕಟ್ಟಡಗಳ ಹಾವಳಿ ಇದೆ. ಆದರೆ ಅರುಣಾಚಲಪ್ರದೇಶ, ಸಿಕ್ಕಿಂ, ನಾಗಾಲ್ಯಾಂಡ್ ಹಾಗೂ ಮಿಜೊರಾಂಗಳಲ್ಲಿ ಈ ಬಗೆಯ ಅನಧಿಕೃತ ಧಾರ್ಮಿಕ ಸ್ಥಳಗಳೇ ಇಲ್ಲ. ಇದಕ್ಕಾಗಿ ಈ ಪ್ರದೇಶಗಳ ನಾಗರಿಕ ಪ್ರಜ್ಞೆಯನ್ನು ಸುಪ್ರೀಂಕೋರ್ಟ್ ಶ್ಲಾಘಿಸಿದೆ. ಈ ಬಗೆಯ ಅನಧಿಕೃತ ಧಾರ್ಮಿಕ ಕಟ್ಟಡಗಳು ತಲೆ ಎತ್ತುವುದಾದರೂ ಹೇಗೆ? ದೇವರ ಹೆಸರಲ್ಲಿ ಭೂಮಿ ಕಬಳಿಸುವ ಹುನ್ನಾರ ಇದು. ಒಂದು ರೀತಿ, ಜನರ ಧಾರ್ಮಿಕ ಭಾವನೆಗಳನ್ನು ಬಳಸಿಕೊಂಡು ನಡೆಸುವಂತಹ ಅವ್ಯವಹಾರ. ಇಂತಹ ಕಟ್ಟಡಗಳು ರಾಜಕಾರಣಿಗಳ ಸಹಕಾರದೊಂದಿಗೆ ಸರ್ಕಾರಗಳ ಮೂಗಿನಡಿಯೇ ಅಪಾರ ಪ್ರಮಾಣದಲ್ಲಿ ಎದ್ದಿವೆ. ಸರ್ಕಾರಗಳೂ ಅಕ್ರಮ ಕಟ್ಟಡಗಳಿಗೆ, ಅತಿಕ್ರಮಣಗಳಿಗೆ ಕುರುಡುಗಣ್ಣಾಗಿಯೇ ಇರುತ್ತವೆ. ರಸ್ತೆಗಳಲ್ಲಿ ಈ ಬಗೆಯ ಕಟ್ಟಡಗಳು ಸೃಷ್ಟಿಸುವ ಸಂಚಾರ ಸಮಸ್ಯೆಗಳಂತೂ ಅಪಾರ.

ಹೋಗಲಿ, ರಸ್ತೆಗಳಲ್ಲಿ, ಗಲ್ಲಿಗಳಲ್ಲಿ ಅಥವಾ ಜನನಿಬಿಡ ಪ್ರದೇಶಗಳಲ್ಲಿ ತಲೆ ಎತ್ತುವ ಗುಡಿ, ಚರ್ಚ್ ಅಥವಾ ಮಸೀದಿಗಳ ಉದ್ದೇಶವಾದರೂ ಸಫಲವಾಗುವುದೆ? ಯಾವುದೇ ಪ್ರಾರ್ಥನಾ ಸ್ಥಳ ಪ್ರಶಾಂತವಾಗಿರಬೇಕೆಂಬುದು ಮೂಲ ನಿಯಮ. ಜನ ಪ್ರಾರ್ಥನಾ ಸ್ಥಳಗಳಿಗೆ ತೆರಳುವುದೂ ಶಾಂತಿ, ನೆಮ್ಮದಿಯನ್ನರಸಿಯೇ. ಆದರೆ ಸಾರ್ವಜನಿಕ ಸ್ಥಳಗಳಲ್ಲಿನ ಧಾರ್ಮಿಕ ಸ್ಥಳಗಳು ಆ ಭಾವನೆ ಉಕ್ಕಿಸುವುದು ಸಾಧ್ಯವಿಲ್ಲ. ಜನ, ವಾಹನಗಳ ದಟ್ಟಣೆಯ ಪ್ರದೇಶಗಳಲ್ಲಿ ಧ್ಯಾನ ಮಾಡುವ ಪ್ರಶ್ನೆಯೇ ಬರದು.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಕಾರ್ಯಪ್ರವೃತ್ತವಾಗಿದ್ದು ಇದೇ ಡಿಸೆಂಬರ್ 31ರೊಳಗೆ ಎಲ್ಲಾ ಅಕ್ರಮ ಧಾರ್ಮಿಕ ಕಟ್ಟಡಗಳ ತೆರವಿಗೆ ಈಗಾಗಲೇ ಆದೇಶವಂತೂ ನೀಡಿದೆ. ಮುಂದೆಯೂ ಮತ್ತೆ ಇಂತಹ ಅಕ್ರಮ ಧಾರ್ಮಿಕ ಕಟ್ಟಡಗಳು ತಲೆ ಎತ್ತದಂತೆಯೇ ಜಾಗರೂಕತೆ ವಹಿಸುವುದು ಮುಖ್ಯ. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಹೊಣೆಹೊರುವಂತೆ ಮಾಡಬೇಕು. ಜೊತೆಗೆ ಹೊಸ ಬಡಾವಣೆಗಳ ರಚನೆ ಸಂದರ್ಭದಲ್ಲೇ ಧಾರ್ಮಿಕ ಸ್ಥಳಗಳಿಗೆ ಸೂಕ್ತ ಜಾಗಗಳನ್ನು ಸ್ಥಳೀಯ ಸಂಸ್ಥೆಗಳೇ ನಿಗದಿಗೊಳಿಸಿರಬೇಕು.

■ ಸಿ. ಜಿ. ಮಂಜುಳಾ

